ISSN : 2320-0391

साहित्य और संस्कृति

# सृजन ಸೃಜನ

हिंदी-कन्नड त्रैमासिक पत्रिका

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

Peer Reviewed Journal

अप्रैल - सितंबर २०२१



# साहित्य और संस्कृति
# सृजन

ISSN - 2320-0391

LIBRARY
NO ..........

वर्ष - 9 हिंदी-कन्नड त्रैमासिक अंक - 27

**Peer Reviewed Journal**


**परामर्श मंडल**

1) प्रो. टी. वी. कट्टीमनी
कुलपति, आंध्रप्रदेश केन्द्रीय जनजातीय
विश्वविद्यालय, विजियानगरम

2) प्रो. ऋषभदेव शर्मा
पूर्व विभागाध्यक्ष, उच्च शिक्षा एंव संशोधन
केन्द्र दक्षिण भारत हिन्दी प्रचार सभा, हैदराबाद

3) प्रो. प्रभा भट्ट
पूर्व विभागाध्यक्ष, हिन्दी अध्यायन विभाग,
कर्नाटक विश्वविद्यालय धारवाड

4) प्रो. प्रतिभा मुदलियार
हिन्दी विभागाध्याक्ष,
मैसूर विश्वविद्यालय, मैसूर

5) प्रों नामदेव गौडा
हिन्दी विभाग, कर्नाटक राज्य अक्कमहादेवी
महिला विश्वविद्यालय, विजयपुर

6) ಡಾ. ಬಸವರಾಜ ಜಗಜಂಪಿ
ನಿವೃತ್ತ ಪ್ರಾಚಾರ್ಯರು, ಕೆ.ಎಲ್.ಇ. ಲಿಂಗರಾಜ
ಕಾಲೇಜ್, ಬೆಳಗಾವಿ

7) ಡಾ. ವ್ಹಿ. ಎಸ್. ಮಾಳಿ
ನಿರ್ದೇಶಕರು, ಶ್ರೀ ಬಿ. ಆರ್. ದರೂರ
ಸಂಶೋಧನಾ ಕೇಂದ್ರ ಹಾರುಗೇರಿ, ಜಿ. ಬೆಳಗಾವಿ

8) ಡಾ. ಮೈತ್ರೆಯಿಣಿ ಗದಿಗೆಪ್ಪಗೌಡರ
ಸಹಾಯಕ ಪ್ರಾಧ್ಯಾಪಕರು, ಕನ್ನಡವಿಭಾಗ,
ರಾಣಿಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

प्रधान संपादक

**डॉ. एस. टी. मेरवाडे**

अवकाशप्राप्त प्राचार्य, बसवेश्वर कला एवं वाणिज्य
महाविद्यालय, बसवन बागेवाडी, विजयपुर

सह संपादक

**डॉ. एस. जे. जहागीरदार**

हिंदी विभाग, अंजुमन कला, विज्ञान एवं वाणिज्य
महाविद्यालय, विजयपुर

संपादक मंडल हिंदी

**डॉ. एस. जे. पवार**
अवकाशप्राप्त प्राचार्य, बंगारम्मा सज्जन महिला
महाविद्यालय, विजयपुर

**डॉ. एस. एस. तेरदाल**
अवकाशप्राप्त प्राचार्य, जे.एस.एस. कला, विज्ञान
एवं वाणिज्य महाविद्यालय, गोकाक

कन्नड

**प्रो. बी. बी. डेंगनवर**
कन्नड विभागध्यक्ष, एस.बी. कला एवं
के.सी.पी. विज्ञान महाविद्यालय, विजयपुर

**डॉ. आर. वी. पाटील**
जे.एस.एस. कला, विज्ञान एवं वाणिज्य
महाविद्यालय, धारवाड

# Peer Reviewed Journal

ISSN : 2320-0391

ವರ್ಷ-೯ ಅಂಕ-೨೭

# ಸೃಜನ

## ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

### ಕನ್ನಡ ವಿಭಾಗ

ಪ್ರಧಾನ ಸಂಪಾದಕರು

**ಡಾ. ಎಸ್. ಟಿ. ಮೇರವಾಡೆ**

ನಿವೃತ್ತ ಪ್ರಾಚಾರ್ಯರು, ಬಿ.ಎಲ್.ಡಿ.ಇ. ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬಸವನಬಾಗೇವಾಡಿ

ಸಂಪಾದಕರು

**ಪ್ರೊ. ಬಿ. ಬಿ. ಡೆಂಗನವರ**

ಮುಖ್ಯಸ್ಥರು, ಕನ್ನಡ ವಿಭಾಗ, ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ

**ಡಾ. ಆರ್. ವಿ. ಪಾಟೀಲ**

ಪ್ರಾಧ್ಯಾಪಕರು, ಕನ್ನಡ ವಿಭಾಗ, ಜೆ.ಎಸ್.ಎಸ್. ಕಾಲೇಜ್ ಧಾರವಾಡ

## ಎಪ್ರೀಲ್-ಸಪ್ಟಂಬರ ೨೦೨೧

ವಿಳಾಸ

**ಸೌಮ್ಯಪ್ರಕಾಶನ**

**'ಕಬೀರ ಕುಂಜ'**

ಮಹಾಬಳೇಶ್ವರ ಕಾಲೋನಿ ದರ್ಗಾರೋಡ, ವಿಜಯಪುರ - ೫೮೬ ೧೦೩

ಮೊ. ೯೪೪೮೧೮೫೭೦೫, ೯೯೦೨೪೯೫೬೯೫

Email : stmerwade1961@gmail.com

मुद्रक : **त्वरित मुद्रण आफसेट प्रिन्टर्स** कागदगेरि गल्ली गदग - 582 101

Email : chaitanyaoffset@gmail.com Mob : 9448223602, 9481523602, 8884495331

**ಇಲ್ಲಿಯ ಲೇಖನಗಳ ಅಭಿಪ್ರಾಯಗಳು, ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ-ಸಂಪಾದಕರು**

# अनुक्रम


| | | | |
|---|---|---|---|
| 1. | महानगर -डॉ. अंजना संधीर : एक परिचय | • डॉ. जुबेदा हाशिम मूल्लाँ | 1 |
| 2. | समकालीन हिंदी गजल और मुनव्वर राना | • डॉ. शिवण्णा एच. | 6 |
| 3. | वर्तमान संदर्भ में हिंदी की आवश्यकता | • डॉ. ज्योति जोशी के. | 10 |
| 4. | डॉ. गंगाप्रसाद विमल के कथा साहित्य में साहित्यिक मूल्य | • डॉ. एस. एस. देसाइ | 12 |


■■

# ಪರಿವಿಡಿ


| | | | |
|---|---|---|---|
| ೧. | ಶಾಸನೋಕ್ತ ಮಹಿಳಾ ಪ್ರತಿನಿಧೀಕರಣ : ಶಾಸನಗಳಲ್ಲಿ ರಾಣಿಯರು | • ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ | ೧೫ |
| ೨. | ಕನ್ನಡ ಸಂಸ್ಕೃತಿಯ ಒಂದು ನೋಟ | • ಡಾ ಆರ್. ವಿ. ಪಾಟೀಲ | ೨೪ |
| ೩. | ವಚನ ಸಾಹಿತ್ಯ ಮತ್ತು ಶೈಕ್ಷಣಿಕ ಮೌಲ್ಯಗಳು | • ಡಾ. ತಿಪ್ಪೇಸ್ವಾಮಿ ಡಿ. ಎಸ್. | ೨೮ |
| ೪. | ಕನ್ನಡ ಮತ್ತು ಹಿಂದಿ ಭಾಷೆಯ ಕೊಂಡಿಯಾಗಿ ಮುಕುಂದ ಜೋಶಿ | • ಡಾ. ಶೋಭಾ ನಾಯಕ | ೩೪ |
| ೫. | ಚಂಪೂವಿನ ಉಗಮ ಮತ್ತು ವಿಕಾಸ | • ಡಾ. ಎಂ. ಎಸ್. ಮಾಗಣಗೇರಿ | ೩೭ |
| ೬ | ಕೋವಿಡ್-೧೯ ಸಾಂಕ್ರಾಮಿಕರೋಗದ ಸನ್ನಿವೇಶದಲ್ಲಿ ಗ್ರಂಥಾಲಯಗಳ ಪುನರಾರಂಭಿಸುವಲ್ಲಿ ಎದುರಿಸಿದ ಸಮಸ್ಯೆಗಳು, ಸವಾಲುಗಳು ಮತ್ತು ಅವಕಾಶಗಳು | • ವಾಯ್. ಬಿ. ಕೊರಡೂರ | ೪೪ |
| ೭ | ಅಕ್ಕ ಮತ್ತು ಸ್ತ್ರೀವಾದ | • ಡಾ. ಶಶಿಕಲಾ ಎಂ. ಮೊರಬದ | ೫೧ |
| ೮. | ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮತ್ತು ಸಮಕಾಲೀನ ಭಾರತದಲ್ಲಿ ದಲಿತರು | • ಡಾ. ಚಂದ್ರು ತಳವಾರ | ೫೫ |
| ೯. | ವಚನ ಅನುಸಂಧಾನ | • ಪ್ರೊ. ಬಾಬು ಅ. ಬೆಣ್ಣಿ | ೫೮ |
| ೧೦. | ಶಿವಶರಣರ ಕಾಯಕ ನಿಷ್ಠೆ | • ಪ್ರೊ. ಪಿ. ಆರ್ ನಾಗರಾಳ | ೬೨ |
| ೧೧. | ನಾಗಚಂದ್ರ | • ಡಾ. ರಮೇಶ ಮ. ಕಲ್ಲನಗೌಡರ | ೬೬ |


■■

**Title- Vachana Literature and Educational Values**

\- Dr. Thippeswamy D.S.

# ವಚನ ಸಾಹಿತ್ಯ ಮತ್ತು ಶೈಕ್ಷಣಿಕ ಮೌಲ್ಯಗಳು

• ಡಾ. ತಿಪ್ಪೇಸ್ವಾಮಿ ಡಿ. ಎಸ್.

ಶಿಕ್ಷಣವೆಂದರೆ ಕೇವಲ ಅಕ್ಷಾರಾಭ್ಯಾಸವಲ್ಲ ಅಕ್ಷರ ಕಲಿತವರೆಲ್ಲರು ಬುದ್ಧಿವಂತರಲ್ಲ ಬದುಕಿನ ಬಗೆಗೆ ಹೊಸ ದೃಷ್ಟಿ ಬೆಳೆಸಿಕೊಳ್ಳಲು ನವೀನ ರೀತಿಯಲ್ಲಿ ಬದುಕಲು ಸಹಾಯಕವಾಗುವ ಜ್ಯೋತಿಯೇ ನಿಜವಾದ ಅರ್ಥದಲ್ಲಿ ಶಿಕ್ಷಣವಾಗಿದೆ ಶಿಕ್ಷಣವು ಬುದ್ಧಿಯ ವಿಕಸನಕ್ಕೆ ಸಹಾಯಮಾಡುವ ಒಂದು ಪರಿಕರವಾಗಿದೆ ಅದು ಎಂದು ಗುರಿಯಲ್ಲಿ ಉಪಕರಣವಾಗಿದೆ ಶಿಕ್ಷಣ ಸಮಾನತೆ ಸೋದರತ್ವ ಭಾವನೆಯನ್ನು ಎಲ್ಲರಲ್ಲು ಬೆಳೆಸುವುದು ಮತ್ತು ಜವಾಬ್ದಾರಿಯುಳ್ಳ ಮಾನವನನ್ನು ನಿರ್ಮಿಸುವುದು ಎಲ್ಲ ಬಗೆಯ ಪೂರ್ವಾಗ್ರಹಗೆಳಿಂದಲೂ ಮುಕ್ತಗೊಳಿಸಿ ಎಲ್ಲರನ್ನು ತನ್ನವರೆಂದು ಬಗೆಯುವ ಮಾನವನ ನಿರ್ಮಾಣವೆ ಶಿಕ್ಷಣದ ಗುರಿಯಾಗಿದೆ. ಪ್ರಾಚೀನ ಕಾಲದ ಶಿಕ್ಷಣ ಪದ್ಧತಿಯಲ್ಲಿ ಬಹಳ ಸಂಕುಚಿತತೆ ಇತ್ತಲ್ಲದೆ ಮತೀಯ ಲಕ್ಷಣಗಳು ಎದ್ದು ಕಾಣುತ್ತಿದ್ದವು ಅಂದು ಶಿಕ್ಷಣವನ್ನು ಧರ್ಮದಿಂದ ಬೇರ್ಪಡಿಸಲು ಆಗುತ್ತಿರಲ್ಲಿಲ್ಲ ಅಂದು ಧಾರ್ಮಿಕ ಶಿಕ್ಷಣವೇ ರೂಢಿಯಲ್ಲಿತ್ತು. ಸಾರ್ವತ್ರಿಕ, ಜಾತ್ಯತೀತ ಮನೋಭಾವನೆಯನ್ನು ಬಿತ್ತಿ ಬೆಳೆಸುವ ಶಿಕ್ಷಣವೆ ಇರಲ್ಲಿಲ್ಲವೆಂದರೆ ಅತಿಶಯೋಕ್ತಿಯೇನಲ್ಲ ದೇವಸ್ಥಾನ, ಮಸೀದಿ ಮುಂತಾದಡೆ ಮಕ್ಕಳಿಗೆ ಶಿಕ್ಷಣವನ್ನು ಕೊಡಲಾಗುತ್ತಿತ್ತು.ಈ ಶಿಕ್ಷಣ ಕೇವಲ ಉಚ್ಚವರ್ಗದವರಿಗೆ ಮಾತ್ರ ಮೀಸಲಗುತ್ತಿತ್ತು.ಶಿಕ್ಷಣವು ಅಂದು ಪುರೋಹಿತ ಶಾಹಿಗಳು ಹಿಡಿತದಲ್ಲಿತ್ತು.ಶಿಕ್ಷಣ ಕೇಂದ್ರಗಳು ಅಂದು ಕೆಲ ಮಟ್ಟಿಗೆ ಮೌಢ್ಯವನ್ನು ಪ್ರೇರೇಪಿಸುವ,ಬೆಳೆಸುವ ಕೇಂದ್ರಗಳಾಗಿದ್ದವು. ಶಿಕ್ಷಣ ಅಂದುಬ್ರಾಹ್ಮಣರ ಗುತ್ತಿಗೆಯೇ ಆಗಿತ್ತು. ಬ್ರಾಹ್ಮಣತ್ಮಕ್ಕೆ ಹಿಂದೇನೋ ಹುಟ್ಟು ಮುಖ್ಯವಾಗಿರಲ್ಲಿಲ್ಲ, ಜ್ಞಾನ ಮುಖ್ಯವಾಗಿತ್ತು.ಇದು ಬರಬರುತ್ತು ತದ್ವಿರುದ್ಧವಾಯ್ತು ಶಿಕ್ಷಣವನ್ನು ಪಡೆಯುವ ಹಕ್ಕು ಅವರದೆ ಅದುದು ಒಂದು ದುರ್ದೈವ. ಅವರ ಕಪಿಮುಷ್ಟಿಯಲ್ಲಿ ಶಿಕ್ಷಣ ಉಳಿದು ಬೆಳೆದು ಬಂದಿತು.೧೨ನೇ ಶತಮಾನದಲ್ಲಿ ಬಸವಣ್ಣನವರ ಮುಂದಾಳತ್ವದ ಅಮೋಘವಾದ ಸಾಮಾಜಿಕ, ಆರ್ಥಿಕ, ಹಾಗೂ ಧಾರ್ಮಿಕ ಕ್ರಾಂತಿ ನಡೆಯಿತು ಮಾನವ ಜೀವನದ ಉನ್ನತಿಗಾಗಿ ಜನಸಾಮಾನ್ಯರ ಜೀವನವನ್ನು ಹಸನುಗೊಳಿಸುವದಕ್ಕಾಗಿ ಬೇಕಾಗುವ ನಿತ್ಯನೂತನ ತತ್ವಗಳನ್ನು ಅವರು ಪರಂಪರಾನುಗತವಾಗಿ ಬಂದ ಸಂಸ್ಕೃತದಲ್ಲಿ ಬೋಧಿಸದೆ ಎಲ್ಲರಿಗೂ ತಿಳಿಯುವ ಕನ್ನಡದಲ್ಲಿ ವಚನಗಳ ಮೂಲಕ ಸಾರಿದರು. ಈ ರೀತಿ ಕನ್ನಡದಲ್ಲಿ ವಿಶ್ವದ ಯಾವ ಭಾಷೆಯಲ್ಲಿಯು ಕಾಣಸಿಗದ ವಚನ ಸಾಹಿತ್ಯ ರಚನೆಯಾಯಿತು. ಇದೊಂದು ಸಾಹಿತ್ಯ ಕ್ರಾಂತಿಯ ಮೂಲಕ ಸಮಗ್ರಕಾಂತಿಯನ್ನುಂಟು ಮಾಡಿ ಜನಸಾಮಾನ್ಯರ ಜೀವನವನ್ನು ಹಸನುಗೊಳಿಸಿದರು.ಇಂಥ ಕ್ರಾಂತಿ ಈಗ ಮತ್ತೊಮೆನಡೆಯ ಬೇಕಗಿದೆ. ಇದರಲ್ಲಿ ಬರಹಗಾರರ, ಕವಿಗಳ ಹಾಗೂ ಸಾಹಿತಿಗಳ ಪಾತ್ರ ಬಹು ಪ್ರಮುಖವಾದದ್ದೆಂದು ಬೇರೆ ಹೇಳಬೇಕು.

ಭಾಷಯ ಮೂಲಕ ಪ್ರತಿ ಸಂಸ್ಕೃತಿಯನ್ನು ಸಂಸ್ಥಾಪಿಸಿದ್ದು ಮತ್ತು ಸಂಘಟನೆದ್ದು ಬಸವಾದಿ ಪ್ರಥಮರ ಹೆಗ್ಗಳಿಕೆಯಾದರೆ, ದೇವ ಭಾಷಯ ಪ್ರಬಲ್ಯ ಕಡಿಮೆಮಾಡಿ ದೇಶ ಭಾಷಗೆ ಪ್ರಾಶಸ್ತ್ಯವಿತ್ತದ್ದು ಕನ್ನಡ ನುಡಿ ಮತ್ತು ಕನ್ನಡ

ಸಾಹಿತ್ಯ ಸಂದರ್ಭದಲ್ಲಿ ತುಂಬಾ ಮಹತ್ವದ ಸಾಧನೆ. ಅವರು ಆಡುನುಡಿಯನ್ನು ಅಚ್ಚುಕಟ್ಟಾಗಿ ದುಡಿಸಿಕೊಂಡರು.

**ನಾರಾಯಣನೆಂಬವನ ಕಾಣೆ, ಗೀರಾಯಣನೆಂಬವನ ಕಾಣೆ !**

**ಬೊಮ್ಮನೆಂಬವನ ಕಾಣೆ, ಗಿಮ್ಮನೆಂಬವನ ಕಾಣೆ !**

ಎಂದು ಕನಸು ತುಂಬಿದ ಗ್ರಾಮೀಣ ಭಾಷಯಲ್ಲಿ ದಿಟ್ಟನುಡಿ ನುಡಿದರು.

ಮೇಲುನೋಟಕ್ಕೆ ಪದ್ಯರೂಪಿಗಳಲ್ಲ ಆದರೆ ಅವು ಕಾವ್ಯವಲ್ಲದಿಲ್ಲ; ಪದ್ಯ ಅಥವಾ ಪದ ಪದಪೋಷಕವಾಗಿ, ತತ್ತ್ವ ಪ್ರತಿಪಾದನೆಗಾಗಿ, ಗೆಜೆಯ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಿ ನಡೆದರೆ ಕಾವ್ಯ ಭಾವದ ಕಾವು ಗರ್ಭಿತ ಚೇತೋಹರಿ ರಚನೆಯಾಗುತ್ತದೆ. ಬಸವಣ್ಣನವರ ಸಾಮಾಜಿಕ ಕ್ರಾಂತಿ ಅಸಮಾನತೆಯ ವಿರುದ್ಧ ಹೇಗೋ ಹಾಗೆ ಅವರ ಸಾಹಿತ್ಯ ರಚನೆ ಸಂಪ್ರದಾಯದ ವಿರುದ್ಧ.ಸಾಪ್ರಾದಾಯಿಕ ಕಾವ್ಯ ಸಾಮಾನ್ಯವಾಗಿ,ಛಂದಸ್ಸಿನ ಚೌಕಟ್ಟಿನಲ್ಲಿ ಬಂಧಿತವಾದದ್ದು ಪ್ರತಿ ಪದ್ಯದಲ್ಲೂ ಪಾದಗಳ ಮಿತಿ, ಗಣದ,ಗುಣಿತ, ನಿರೀಕ್ಷತ ಲಯದ ಆವರ್ತನ, ನಿಯತ ಯತಿಯ ಅನಿವಾರ್ಯತೆ ಇತ್ಯದಿ ಸಂಕಲೆಗಳುಂಟು ಆದರೆ ವಚನದಲ್ಲಿ ಆಬಗೆಯ ಬಂಧನ ಇಲ್ಲ. ಏಕೆಂದರೆ ಅದು ಪದ್ಯ ಅಲ್ಲ.

ಇದು ಗಣಪರಿವೃತ್ತಿ ಅಲ್ಲ, ಏಕತಾನತೆಗೆ ಬಲಿಯಾಗದ ಲಯದ ಗಣಿತ ಗುಣಿತ ಇಲ್ಲಿನದು ಪದಗಳ ಸರ್ಕಲ್ ಅಲ್ಲ, ಕಾವ್ಯ ವಸ್ತುವಿನ ವಿವಿಧ ವೈವಿದ್ಯೇಮಯ ನರ್ತನ. ಸಮಾಜದಲ್ಲಿ ಬದುಕಿನ ವರ್ತನೆಯಲ್ಲಿ ಶರಣರಿಗೆ ಮನುಷ್ಯ ಬದುಕೆಬೇಕಾಗಿತ್ತು ಬಡವರಿಂದ ಬಡವರ ಬದುಕಿಗಾಗಿ ಅನ್ವೇಷಿಸಿದ್ದು ವಚನ ಸಿದ್ದಾಂತ, ಆದರೆ ಸಂಪ್ರದಾಯಸ್ಥರು ತಮ್ಮ ಸ್ವಾರ್ಥಕ್ಕಾಗಿ ದೇವಾಲಯ, ಶಾಸ್ತ್ರ, ಪುರಾಣಗಳನ್ನು ಸೃಷ್ಟಿಸಿದ್ದರು. ಅವು ಮಲೆತು ನಿಂತು ನೀರಿನಂತೆ ಕೊಳಕಾಗಿದ್ದವು. ಸೊಫಿಗಳು ಸಿಡಿದಂತೆ ಅಲ್ಲಮ ಸಿಡಿದೇಳಬೇಕಾದ ತುರ್ತು ಇಲ್ಲಿ ಹೆಚ್ಚಾಗತೊಡಗಿತು. ಸೊಫಿಗಳ ಸಂಪರ್ಕದ ಸುಳಿಹುಗಳನ್ನು ನಾವು ಇಲ್ಲಿಯೇ ಗುರುತಿಸಿಕೊಳ್ಳವುದು. ಆದರೆ ಭಾರತಕ್ಕೆ ೧೩ನೇ ಶತಮಾನಕ್ಕೆ ಸೊಫಿಗಳ ಆಗಮನವಾಗಿರುವುದು ತಿಳಿದು ಬರುತ್ತದೆ. ಅಲ್ಲಮನು ಆ ಕಾಲದ ಅನೇಕ ಪಂಥದ ಪಂಡಿತರ ಜೊತೆ ಮುಖಾಮುಖಿ ಹೊಂದಿರುವುದರಿಂದ ಬಹುಶಃ ಸೂಫಿಗಳ ಸಂಪರ್ಕವೂ ಬಂದರಬಹುದೆಂಬ ಅನುಮಾನ ಪಡಬಹುದು ಅಷ್ಟೇ.ಏನೇ ಆಗಲಿ ವಚನರಲ್ಲಿ ಸೂಫಿಗಳ ಸಮಾನ ಗುಣಧರ್ಮಗಳ ಸಾಮ್ಯತೆ ಇರುವುದಂತೂ ಸತ್ಯ.

ಮಠವೇಕೋ ಪರ್ವತವೇಕೋ ಜನವೇಕೋ ನಿರ್ಜನವೇಕೋ

**ಚಿತ್ತ ಸಮಾಧಾನವುಳ್ಳ ಶರಣಂಗೆ ?**

**ಮತ್ತೆ ಹೊರಗಣ ಚಿಂತೆ, ಧ್ಯಾನ, ಮೌನ, ಜಪ, ತಪವೇಕೋ**

**ತನ್ನ ತಾನರಿದ ಶರಣಂಗೆ ಗುಹೇಶ್ವರಾ ?**

ತನ್ನ ಕಾಲದಲ್ಲಿ ಈಗಾಗಲೇ ಆಚರಣೆಯಲ್ಲಿದ್ದು ಪವಿತ್ರ ಕ್ಷೇತ್ರಗಳೆಂದೋ ಪುಣ್ಯಕ್ಷೇತ್ರಗಳೆಂದೋ ಅವುಗಳ ಆರಾಧನೆಯಲ್ಲಿ ಮನುಷ್ಯ ಮನುಷ್ಯರನ್ನು ದೂರೀಕರಿಸಿದ್ದ. ಜನತೆ ಮತ್ತು ದೇವರ ನಡುವೆ ಪುರೋಹಿತ ಸೇರಿಕೊಂಡು ಭಕ್ತಿಯ ಉದ್ದೇಶ ವ್ಯರ್ಥವಾಗಿ ಫಲಾಪೇಕ್ಷೆಯ ಆಸೆಗೆ ತಾನೇ ಬೇಕಾದಂತೆ ಮಾರ್ಪಡಿಸಿಕೊಳ್ಳುವುದನ್ನು ಮಾಡತೊಡಗಿದ್ದ.

**ವೇದಶಾಸ್ತ್ರ ಪುರಾಣ ಆಗಮನ ಬಹುಪಾಠಿಗಳು**

**ಅನ್ನ ಹೊನ್ನು ವಸ್ತ್ರ ಕೊಡುವವನ ಬಾಗಿಲು ಕಾಯುವ......**

**ಎಲ್ಲ ಹಿರಿಯರು ಲಕ್ಷ್ಮಿಯ ದ್ವಾರಪಾಲಕರಾದರು ಗುಹೇಶ್ವರಾ,**

ಹೀಗೆ ಅಲ್ಲಮನು ಅವರು ಸೃಷ್ಟಿಸಿದ ಸದೃಢವಾದ, ಸುರಕ್ಷಿತವಾದ ಸ್ಥಾವರಗಳನ್ನು, ತಮಗೆ ಬೇಕಾದಂತೆ ಅಕ್ಷರ ಬಳಸಿಕೊಳ್ಳುವವರನ್ನು ವಿರೋಧಿಸುತ್ತಾನೆ. ಎಲ್ಲಾ ಹಿರಿಯರು ಲಕ್ಷಿಯ ದ್ವಾರಪಾಲಕರಾದದ್ದನ್ನು ಎತ್ತಿ ತೋರಿಸುವುದರ ಮುಖಾಂತರ ಈ ಪ್ರಸ್ತುತ ದಿನದ ಬಾನಗೇಡಿ ಕೆಲಸವನ್ನು ವಿಡಂಬಿಸಿದಂತಿದೆ.ತನ್ನ ಅನುಭವದ ಮೇಲೆ ತನ್ನ ಬದುಕನ್ನು ಕಟ್ಟಿಕೊಳ್ಳಬೇಕಾಗಿದ್ದರಿಂದ 'ತನ್ನರಿವೆ ತನಗೆ ಗುರು' ಸಿದ್ದಾಂತ ಕಟ್ಟಿಕೊಡುತ್ತಾನೆ.

ಕೃತಯುಗದಲ್ಲಿ ಶ್ರೀ ಗುರು-ಶಿಷ್ಯಂಗೆ ಬಡಿದು ಬುದ್ದಿಯ

**ಕಲಿಸಿದಡೆ ಆಗಲಿ, ಮಹಾಪ್ರಸಾದವೆಂದೆನಯ್ಯಾ**

**ತ್ರೇತಾಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬೈದು ಬುದ್ದಿಯ**

**ಕಲಿಸಿದಡೆ, ಆಗಲಿ ಮಹಾಪ್ರಸಾದವೆಂದೆನಯ್ಯಾ**

**ದ್ವಾಪರದಲ್ಲಿ ಶ್ರೀ ಗುರು ಶಿಷ್ಯಂಗೆ ಝಂಕಿಸಿ ಬುದ್ದಿಯ**

**ಕಲಿಸಿದಡೆ, ಆಗಲಿ, ಮಹಾಪ್ರಸಾದವೆಂದನಯ್ಯಾ**

**ಕಲಿಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ವಂದಿಸಿ ಬುದ್ದಿಯ**

**ಕಲಿಸಿದಡೆ, ಆಗಲಿ ಮಹಾಪ್ರಸಾದವೆಂದನಯ್ಯಾ**

**ಗುಹೇಶ್ವರಾ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆನಾನು ಬೆರಗಾದೆನು.**



ISSN : 2320-0391

ನಾಲ್ಕು ಯುಗಗಳಲ್ಲಿ ಮೊದಲನೆಯದಾದ ತ್ರೇತಾಯುಗವು ಭೋಗೋಪ ಭೋಗಗಳಲ್ಲಿ ಅತ್ಯಂತ ಆಸಕ್ತಿಯುಳ್ಳ ಆ ಯುಗದ ಜನರ ಮನಃ ಪ್ರವೃತ್ತಿಯ ಸಂಕೇತವಾಗಿದೆ.ಸುಖಲೋಲುಪ್ತ, ಶಿಷ್ಯಂಗೆ ಕೃತಕಯುಗದ ಶಿಷ್ಯ ಎಂದು ಹೇಳಬಹುದು.ಮೋಹ ಬಂಧನದಿಂದ ಅವನನ್ನು ಹೊರತೆಗೆದು ನಿತ್ಯ ಸುಖಮಾರ್ಗದಲ್ಲಿ ನಡೆಸುವುದು ಸುಲಭದ ಕಾರ್ಯವಲ್ಲ. ಆದ್ದರಿಂದ ಶಿಷ್ಯನ ಹಿತ ಬಯಸುವ ಶ್ರೀ ಗರು ಅವನನ್ನು ಬಡಿದು ದಂಡಿಸಿ ಬುದ್ಧಿಯನ್ನು ಕಲಿಸಬೇಕಾಗುತ್ತದೆ.ತ್ರೇತಾಯುಗವು ಶಕ್ತಿ ಮತ್ತು ಸಿದ್ಧಿಗಳ ಅತಿ ಕಾಮನೆಯನ್ನು ಸೂಚಿಸುತ್ತದೆ. ಅಂಥ ಕಾಮನೆಯುಳ್ಳ ಶಿಷ್ಯನನ್ನು ಉದ್ಧರಿಸಿ ಬಯಸುವ ಶ್ರೀ ಗುರು ಬೈದಾದರೂ ಸರಿ, ಆತನ ಸಿದ್ಧಿಗಳನ್ನುಕೆಡಿಸುತ್ತಾನೆ. ಆತ್ಮಬುದ್ಧಿಯನ್ನು ಅವನಲ್ಲಿ ಜಾಗೃತಗೊಳಿಸುತ್ತಾನೆ.ದ್ವಾಪರ ಯುಗವು ಪರಾಕ್ರಮ ಯಶಸ್ಸು ಮತ್ತು ಕೀರ್ತಿಗಳನ್ನು ಸಂಕೇತಿಸುತ್ತದೆ. ಇವುಗಳಲ್ಲಿ ಆಸಕ್ತನಾಗಿರುವ ಶಿಷ್ಯನನ್ನು ಶ್ರೀ ಗುರು ಝುಂಕಿಸಿ, ಗದರಿಸಿ ಬುದ್ದಿಯನ್ನು ಕಲಿಸುತ್ತಾನೆ. ಕಲಿಯುಗದ ಶಿಷ್ಯನಲ್ಲಿ ಜ್ಞಾನ ವಿಜ್ಞಾನಗಳ ಬಗ್ಗೆ ಜಿಜ್ಞಾಸ ಇದೆ. ಅವನಲ್ಲಿ ಸುಖ, ಸಿದ್ಧಿ ಮತ್ತು ಕೀರ್ತಿಗಳ ಬಗ್ಗೆ ಹಂಬಲ ಅಷ್ಟಕಷ್ಟೆ.ಅವನನ್ನು ಶ್ರೀ ಗುರು ಆವರಿಸುತ್ತಾನೆ. ಮತ್ತು ಪರತತ್ವದ ಶುದ್ಧ ಜ್ಞಾನವನ್ನು ಕರುಣಿಸುತ್ತಾನೆ. ಇದು ಗುಹೇಶ್ವರನ ಕಾಲದ ಕಟ್ಟಳೆಯ ಮಹಿಮೆ.ಶಿಷ್ಯನಿಗೆ ತಕ್ಕ ಬೋಧನೆ ಯುಗಕ್ಕೆ ತಕ್ಕ ವಿಧಾನ. ಶಿಷ್ಯರ ಒಲವು ನಿಲವುಗಳನ್ನುನೋಡಿದಲ್ಲಿ ಶ್ರೀ ಗುರು ಉಪದೇಶಿಸಬೇಕು ಆ ಉಪದೇಶದಲ್ಲಿ ಶಿಷ್ಯರಿಗೆ ಶ್ರದ್ಧೆ ಇರಬೇಕು ಹಾಗೂ ಸತತವಾಗಿ ಸಾಧನೆ ಮಾಡುವ ಛಲವಿರಬೇಕು ಎಂದು ವಿಚಾರಗಳನ್ನು ವಚನಗಳಲ್ಲಿ ಕಾಯುತ್ತೇವೆ.

**ಜ್ಯೋತಿಯೊಳಗಣ ಕರ್ಪೂರಕ್ಕೆ**
**ಅಪ್ಪುವಿನ ಕೈಯಲ್ಲಿಪ್ಪಾ ಉಪ್ಪು**
**ಶ್ರೀ ಗುರುವಿನ ಹಸ್ತಿದೊಳಿಪ್ಪ ಶಿಷ್ಯರಿಗೆ**
**ಈ ಮೂರುಕೈಯೂ ಬೇರೆ ಕ್ರಿಯಾವರ್ತನೆಯುಂಟೆ?**
**ಗುಹೇಶ್ವರಾ?**

ಶಿಷ್ಯನು ಗುರುವಿನ ಕರುಣೆಯಿಂದ ಭಕ್ತನಾಗಿ ಲಿಂಗದಲ್ಲಿ ಸೇರುವರು.ಜ್ಯೋತಿಯನ್ನು ಬೆಳಗಿಸುವ ಕರ್ಪೂರವು ಉರಿದು ಇಲ್ಲವಾಗುವದು. ಸಮುದ್ರದ ನೀರಿನಲ್ಲಿರುವ ಉಪ್ಪು ನಿರನ್ನು ಸೇರಿಕೊಳ್ಳುವರು.ಇವುಗಳಂತೆ ಶ್ರೀ ಗುರುವಿನ ಕರುಣೆಯಿಂದ ಶಿಷ್ಯನು ಗುಹೇಶ್ವರನ... ಸೇರಿ ಹೋಗುವನೆಂದು ಅಲ್ಲಮಪ್ರಭು ವಿವರಿಸಿದ್ದಾರೆ.

ಉರಿಲಿಂಗ ಪೆದ್ದಿಗಳು ತಮ್ಮ ವಚನದಲ್ಲಿ ಸದ್ಗುರು... ಕೃಪೆಯೇವಾಙ್ಮನೋತೀತ ಮಹಾಘನ ಪರಿಣಾಮ... ಸುಖವನ್ನು ನೀಡುತ್ತದೆಂದಿದ್ದಾರೆ. ಶ್ರೀ ಗುರುವು ಒಲಿದೊಲಿ... ಕೊಡುವ ಪರಿ ಎಂತಯ್ಯ ?ಒಲಿಸುವ ಪರಿದಾಸೋಹ... ಒಲಿದ ಪರಿ ಪ್ರಸಾದ.ಕೂಟದ ಪರಿ ನಿರ್ವಂಚಕತ್ವ... ಒಲಿದೊಲಿಸಿ ಕೂಡಿದ ಪರಿ ಪರಿಣಾಮವಯ್ಯ ಉರಿಲಿಂಗ ಪೆದ್ದಿಪ್ರಿಯಾ ವಿಶ್ವೇಶ್ವರಾ.ಶಿಷ್ಯನ ಗುರುತ್ವವನ್ನು ಗುರುವಿ... ಮಹತ್ವವನು. ಗುರುಶಿಷ್ಯನಾದ ಪರಿಯನು, ಅರಿಯ... ಬಲ್ಲರು? ವಿಜ್ಞಾನೋತೇತ ಉಪಮಿಸಬಾರದು. ಮಹಾಕ್ರೀಯನು ಭಕ್ತಿಯಿಂದ ಗುರುಭಕ್ತಿಬಲ್ಲನಾಗಿ ಶಿಷ್ಯನಾದ ಪರಿ ಬೀಜ ವೃಕ್ಷನ್ಯಾಯದಂತೆ ಅವಿನಾಭಾವವಯ್ಯ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರ ಶ್ರೀ ಗುರು ಮಾಡಿದ ಗುರುತ್ವ... ಉಪಮಾತೀತವು...... ಶ್ರೀಗುರು ದರ್ಶನ ಸ್ಪರ್ಶನ ಮಾಡಿ... ಸುಖಿಯಪ್ಪ ನಾನು ಶ್ರೀ ಗುರುಲಿಂಗ ಸಾಕ್ಷಾತ್ವರ ಶಿವಲಿಂಗ... ತಾನೆ ಗುರುದೇವೋ ಮಾಹಾದೇವೋ ಎಂಬುದಾಗಿ ... ಶ್ರೀ ಗುರು ಹರಿಬ್ರಹ್ಮಾದಿ ದೇವದಾನವ ಮಾನವರಿಗೆಲ್ಲಾ... ಗುರು ಕಾಣಭೋಸರ್ವ ಋಷಿಜನಾಂಗಗಳಿಗೆಲ್ಲಾ... ಗುರುಕಾಣಿ ಭೋ ಇವರೆಲ್ಲರಿಗೂ ಗುರುವಾಗಿ ಇರಬೇಕು... ಕೆಲಂಬರಿಗೆ ಲಘುವಾಗಿರಲಾಗದು ಇಷ್ಟಂಗೆ ಗುರು ಅನಿಷ್ಟಂಗೆ... ಲಘುವಾಗಿರಲಾಗದು ಸರ್ವರಿಗೂ ಸಮಾನವಾಗಿರಬೇಕು... ಕಾಣಾ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

ತರಗತಿಯ ಎಲ್ಲಾ ಮಕ್ಕಳಿಗೂ ಸಮಾನವಾದ ಮೇ... ವಿಶ್ವಾಸ ವಾತ್ಸಲ್ಯಗಳಿಂದ ನಿಷ್ಪಕ್ಷಪಾತವಾದ ಜ್ಞಾನವನ್ನು... ಗುರುವಾದವನ್ನು ಹಂಚಬೇಕು ಯಾವುದೇ ಕಾರಣಕ್ಕೆ ಧ... ಕನಕಗಳಿಂದ ಭಿನ್ನ ಭೇದವನ್ನು ಮಾಡಬಾರದು ಎಂದಿದ್ದಾರೆ... ಶ್ರೀ ಗುರುಲಿಂಗ ಜಂಗಮ ಪ್ರಸಾದ ಒಂದೇ ಪರಶಿ... ಮೂರ್ತಿ ಮಹಾವಸ್ತುಗಳು ಕೇಳಿರಣ್ಣಾ.ಶ್ರೀ ಗುರುಲಿಂಗದ... ಬಸವಣ್ಣನ ಕಂಡೆನು ಬಸವಣ್ಣನಲ್ಲಿ ಶ್ರೀ ಗುರುಲಿಂಗ... ಕಂಡೆನು.ಶ್ರೀ ಗುರುವಿನಲ್ಲಿ ಸಕಲ ಮಹೇಶ್ವರ... ಅನುಕೂಲವ ನುಡಿಯದೆ ಪ್ರತಿಭಟಿಸಿ ನುಡಿಯಲಾಗ... ನುಡಿದಡೆ ಅದು ಶ್ರದ್ಧೆಯಲ್ಲಿನಮಗೆ ಸನ್ಮಾರ್ಗವ... ತೋರಿಸುವ ಗುರುದೈವದಲ್ಲಿ ಶ್ರದ್ಧೆಯಲ್ಲಿದ್ದವನ... ಪರಶಿವನೊಲ್ಲನಯ್ಯ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವ...


ISSN : 2320-0391

ಎಂದ್ದಿದ್ದಾರೆ. ಗುರುಮುಖದಲ್ಲಿ ಬಂದುದೇ ಶುದ್ಧ ಪ್ರಸಾದ ಗುರುವಿನ ನೋಟದ ನೇರದಲ್ಲಿ ನಂದುದೇ ನೇತ್ರ ಪ್ರಸಾದ ಶ್ರೀ ಗುರು ವಿಶ್ವವೆಂಬ ಮಾಡಿ ನಂಬಿರಣ್ಣಾ ಅವಿಶ್ವಾಸದಿ ಕೆಡದಿರಿ ಕೆಡದಿರಿ ಸರ್ವಸದ್ಭಾವ ವಿಶ್ವಸದಿಂದ ಬದುಕಿರಯ್ಯಾ ಎನ್ನುವ ಸಾಲುಗಳೇ ಉರಿಲಿಂಗ ಪೆದ್ದಿಗಳ ವಚನಗಳಲ್ಲಿ ಕಂಡು ಬರುತ್ತವೆ. ಸದ್ಗುರುವಿಂದ ಮಹತಪ್ಪ ಮಹಾಲಿಂಗ ಉತ್ಪತ್ತಿ ಸದ್ಗುರುವಿಂದ ಉರಿಲಿಂಗ ಉತ್ಪತ್ತಿ ಸದ್ಗುರುವೇ ಶವಲಿಂಗವು ಸದ್ಗುರುವೆ ಜಂಗಮಲಿಂವು ಸದ್ಗುರುವೆ ಪ್ರಸಾದಲಿಂಗವು, ಸದ್ಗುರುವೆ ಸದ್ಭಕ್ತನು ಎಂದೆಂಬ ಮಹಾಜ್ಞಾನ ಜ್ಯೋತಿ ಪ್ರಕಾಶವಾದ ಜ್ಯೋತಿರ್ಮಯಲಿಂಗವೇ ಗುರುವಯ್ಯ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ ಎನ್ನುವಲ್ಲಿ ಜ್ಞಾನ ಪ್ರಕಾರವನ್ನು ನೀಡುವ ಗುರುವು ನಮ್ಮನ್ನು ಮಾನವೀಯತೆಯತ್ತ ಕೊಂಡೂಯ್ಯುವುದರಿಂದ ಎಲ್ಲಕ್ಕೂ ಮಹತ್ತರನಾಗಿದ್ದಾನೆ. ಎಂದು ವಚನದಲ್ಲಿ ನಿರೂಪಿಸಲಾಗಿದೆ. ಇಂತಹ ಮಹಾಪ್ರಕಾಶದಿಂದ ಮತಿಗಳನ್ನು ಬೆಳಗಲಾರದ ಗುರುವು ಅಲ್ಪನಾಗುತ್ತಾನೆಂದೂ ಉರಿಲಿಂಗ ಪೆದ್ದಿಗಳು ತಿಳಿಸಿದ್ದಾರೆ. ಭಾಷೆಯುಲ್ಲಿ ಪಾಂಡಿತ್ಯ ಸಾಧಿಸಿ ಅಹಂಕಾರಕೂಳಗಾಗಬಹುದುದೆಂಬುದಕೆ ಬಸವಣ್ಣನವರು ಎಚ್ಚರಿಸುತ್ತಾರೆ. ಏಕೆಂದರೆ ಮಾತಿನ ಮಥನದಲ್ಲಿ ಶಬ್ದ ಸಂಭ್ರಮದಲ್ಲಿನಮ್ಮ ನುಡಿ ಗರ್ವದಿಂದ ಕೂಡಿ ಭಗವಂತನಿಂದ ನಮ್ಮನ್ನು ದೂರಗೂಳಿಸಬಹುದು.ಅವರೆಹೇಳೀರುವಂತೆ.

**ಓದಿನ ಹಿರಿಯರು ಬಾಷೆಯಹಿರಿಯರು,**<br>
**ವೇದದ ಹಿರಿಯರು, ಶಾಸ್ತ್ರದ ಹಿರಿಯರು,**<br>
**ಯವರೆಲ್ಲರೂ ತಮ್ಮ ತಮ್ಮನೇ ಮರೆದವರಲ್ಲದೇ**<br>
**ನಿಮ್ಮ ಮರೆದುದಿಲ್ಲ ಕೂಡಿಕೊಂಡಪ್ಪ ಕೂಡಲಸಂಗಮದೇವಾ**

ಹೀಗೆ ಭಾಷೆ, ಓದು, ವೇದ, ಶಾಸ್ತ್ರದಲ್ಲಿ ಹಿರಿತನ ಸಾಧಿಸಿ ಅಹಂಕಾರಕ್ಕೊಳಗಾಗಿ ನುಡಿಯಲ್ಲಿ ಗರ್ವ, ನಡೆಯಲ್ಲಿ ಹಗೆತನ ತುಂಬಿದರೆ ಭಗವಂತನೂಲುಮೆ ಸುಲಭ ಸಾಧ್ಯವಲ್ಲ. ಕೇವಲ ಮಾತಿನಲ್ಲಿ ಜಾಣತನ ಸಾಧಿಸಿ, ಇದಿರ ಗೆಲಬೇಕೆಂದು ನುಡಿಯುವುದರಲ್ಲಿ ಯಾವ ಪಾಂಡಿತ್ಯವೂ ಇರುವುದಿಲ್ಲ. ಏಕೆಂದರೆ ಅನುಭಾವದ ಕಲ್ಪನೆ ಇಲ್ಲದೇ ಭಕ್ತಯ ಸಂಬಂಧವಿಲ್ಲದೇ ಆಡಿದ ಮಾತು ಹಾಡಿದ ಗೀತೆ ಇವೆಲ್ಲ ಎಷ್ಟೇ ವ್ಯಾಕರಣಬದ್ಧವಾಗಿದ್ದರೂತಾಳ ಮೇಳಗಳಿಂದ ಸಿದ್ಧರಾಮ ಶಿವಯೋಗಿಗಳ ವಿಚಾರದಂತೆ 'ವ್ಯಾಕರಣದಿಂದ ಭಾಷಶುದ್ಧಿಯಲ್ಲದೇ ಹೃದಯ ಶುದ್ಧಿಯಿಲ್ಲ' ಇದೇ ಭಾವ ಬಸವಣ್ಣನವರ ವಚನದಲ್ಲೂ ಕಾಣಬಹುದು.

**ಮಾತು ಬಲ್ಲಾತ ಜಾಣನಲ್ಲ**<br>
**ಗೀತ ಬಲ್ಲಾತ ಜಾಣನಲ್ಲ**<br>
**ಜಾಣನು ಜಾಣನು ಆತ ಜಾಣನು**<br>
**ಲಿಂಗದ ನೆರೆನಂಬಿದಾತ, ಜಂಗಮಕ್ಕೆ**<br>
**ಧನವ ಸೆವೆಸುವಾತ.**

ಹೀಗೆ ಲಿಂಗ ಜಂಗಮ ಪರಿಕಲ್ಪನೆಯ ಅರಿವಿಲ್ಲದೇ ಬಿರಿಯಸಂವಹನ ಕೌಶಲ್ಯಗಳು ಆತ್ಮಸಂತೋಷವನ್ನೀಯದೇ ವ್ಯರ್ಥವೆನಿಸುವವು. ಲಿಂಗವನ್ನು ತೋರಿಸಲು, ಚಲಿಸಲು ಆ ಭಾಷಗೆ ಭೌತಿಕದ ಯಾವ ನಿಯಮ, ಕಟ್ಟಳೆ,ವ್ಯಕರಣದ ಹೊಂದಿಕೆ, ಸಂಗೀತದ ರಾಗಗಳ, ತಾಳಗಳ ಯಾವುದೇ ಬಂಧನವಿಲ್ಲ. ಲಿಂಗವನೊಲಿಸಲು ಅಂತರಂಗ ಶಿದ್ಧತೆಯಿಂದ ಕೂಡಿದ ಆತ್ಮವಂಚನೆಯಿಲ್ಲದ, ವಚನ ಅಗತ್ಯವಾದಿದೆ. ಬಸವಣ್ಣನವರ ವಚನ ಅದನ್ನು ಸ್ಪಷ್ಟೀಕರಿಸುತ್ತದೆ.

**ತಾಳ ಮನ ಸರಿಸಮಾನವನರಿಯೆ**<br>
**ಓಜೆ ಬಜಾವಣೆಯ ಲೆಕ್ಕವನರಿಯೆ**<br>
**ಅಮೃತಗಣ ದೇವಗಣವನರಿಯೆ**<br>
**ಕೂಡಲಸಂಗಯ್ಯಾ ನಿಮಗೆ ಕೇಡಿಲ್ಲವಾಗಿ ಅನು**<br>
**ಒಲಿದಂತೆ ಹಾಡುವೆ.**

ಹೀಗೆ ಯಾವುದೇ ಕೃತಕ ನಿಯಮಗಳಿಲ್ಲದೆ ಒಲಿದಂತೆ ಹಾಡಿದಗೀತೆ ಮಾತ್ರ ಅನುಭಾವವಾಗಲು ಸಾಧ್ಯ.ಇದು ಬಸವಣಾನವರಸಂವಹನ ಕೌಶಲ್ಯದ ವಿಶೇಷತೆ ಯಾಗಿದೆ.ಇದು ಇದಿಂನ ಜಗತ್ತಿಗೆ ಅತೀ ಅವಶ್ಯವಾದ ಸಂವಹನ ಕೌಶಲ್ಯ ವೆನಿಸಿದೆ.ಬದುಕು ಎನ್ನುವುದು ಇಂದು ಇದ್ದು ನಾಳೆ ಹೋಗುವಂತಹದು. ಆದರೆ ಇದ್ದ ಬದುಕು ಹೇಗಿರಬೇಕು? ಬದುಕಲೇ ಬೇಕು ಎಂದಾಗಿರುವಾಗ ಬದುಕಿದ ಬದುಕು,ಬದುಕಾಗಿ ಅರಳಬಾರದೆ? ಬಸವಣ್ಣನವರ ಮಾತನ್ನು ಮತ್ತೆ ಮತ್ತ ನೆನಪಿಸಿಕೊಳ್ಳೋಣ.

**ಲೇಸೆನಿಸಿಕೊಂಡು ಅಯ್ದು ದಿನ ಬದುಕಿದರೇನು?**<br>
**ಲೇಸೆನಿಸಿಕೊಂಡು ನಾಲ್ಕು ದಿನ ಬದುಕಿದರೇನು?**<br>
**ಲೇಸೆನಿಸಿಕೊಂಡು ಮೂರು ದಿನ ಬದುಕಿದರೇನು?**<br>
**ಲೇಸೆನಿಸಿಕೊಂಡು ಎರಡು ದಿನ ಬದುಕಿದರೇನು?**<br>
**ಕೂಡಲಸಂಗನ ಶರಣರ ವಚನದಲ್ಲಿ**<br>
**ಲೇಸೆನಿಸಿಕೊಂಡು ಒಂದು ದಿನ ಬದುಕಿದರೇನು?**<br>
**ಲೇಸಲ್ಲದ ಸಾವಿರ ವರುಷದ ಬದುಕಿಗಿಂತ**<br>
**ಲೇಸಿನ ಚಣದ ಬದುಕು ಲೇಸು.**


ISSN : 2320-0391

ಸಮಾಜದಲ್ಲಿ ಇರುವುದು ಮುಖ್ಯವಲ್ಲ ಹೇಗಿದ್ದೆವು? ಎಂಬುದು ಮಾತ್ರಮುಖ್ಯ. ಇರುವಷ್ಟು ದಿನಗಳಲ್ಲಿ ಎಲ್ಲರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿ ಎಲ್ಲರೊಳಗೊಂದಾಗಿ ಬಾಳುವುದು ತಾನೇ. ಮಾನವ ಧರ್ಮ? ಈ ಬದುಕಿನ ಜೊತೆಯಲ್ಲಿ ಶಿಕ್ಷಣದ ಅರಿವು ಇದ್ದರೆ ಮನುಷ್ಯನಲ್ಲಿ ಆಚಾರ-ವಿಚಾರ, ಸಂಪ್ರದಾಯ, ನೀತಿ, ಬದುಕುವ 'ಕಲೆ ನಾವು ಹೇಗಿರಬೇಕೆಂಬುದನ್ನು ಸಾರಿ ತೋರಿದ ಮಾರ್ಗದರ್ಶಕ ಸದಾ ನಮ್ಮೊಡನಿರುವಾಗ ನಾವಾವುದಕ್ಕೂ ಹೆದರುವ ಪ್ರಮೆಯವಿಲ್ಲ. ಆದರೆ ಮನೆಯಲ್ಲಿ ದೇವರೇ ಬಂದು ಕುಳಿತಾಗಲೂ 'ಅಯೋಒಂದಷ್ಟು ಜಾಗ ಕಡಿಮೆಯಾಯಿತಲ್ಲ' ಎಂದು ಕೊರಗುವ ಬದಲು ಬಂದ ಒಳಿತಿಗಾಗಿ ಸಂತಸಪಡುವ ಮನುಷ್ಯನಾಗಿ ಬಾಳಬೇಕು.

ಈ ಬದುಕೆಂಬುದು ಅಷ್ಟೇ! ನೀರ ಮೇಲಿನ ಗುಳ್ಳೆಯಿದ್ದಂತೆ. ಬದುಕಿನ ಸುಂದರತೆಯನ್ನು ಅನುಭವಿಸುವ ಮೊದಲೇ ಕರಗಿ ಹೋಗಿರುತ್ತದೆ. ನಂತರ ಕೊರಗುವುದು. ಕೊರಗುವಂತಹ ಪರಿಸ್ಥಿತಿಯನ್ನು ನಿರ್ಮಿಸಿಕೊಂಡವರೂ ನಾವೇ, ಕೊರಗಿ ಕರಗುವವರೂ ನಾವೇ! ಬಸವಣ್ಣನವರಂತಹ ಅನುಭಾವಿಗಳು ನುಡಿದುದು ಕೇವಲ ಮಾತುಗಳಲ್ಲ.ಬದುಕಿಗೆ ಅವರು ಉಡುಗೊರೆಯಾಗಿ ನೀಡಿದ ಅಮೂಲ್ಯ ಮುತ್ತುಗಳ ದಿವ್ಯತ್ವವನ್ನು ಅರಿಯಲಾಗದೆ ನಾವು ಬರಿದೆ ಕೊರಗಿದರೆ ?ಕೊರಗುವುದು ಎಲ್ಲದಕ್ಕೂ ಔಷಧಿಯಲ್ಲ. ಜಗತ್ತಿನಲ್ಲಿ ವಿಧವಿಧದ ವಸ್ತುಗಳಿವೆ. ಅದರಲ್ಲಿ ನಮಗೇನು ಬೇಕು, ನಮಗದೇತಕೆ ಬೇಕು ಎಂದು ನಿರ್ಧರಿಸಬೇಕಾದವರು ನಾವು.ಜಾಣತನದ ಆಯ್ಕೆಯಲ್ಲಿ ಯಶಸ್ಸು ಗಳಿಸಿದರೆ ಬದುಕು ಸುಂದರ. ಇಲ್ಲದಿದ್ದರೆ ಘನಘೋರ.ಅಂದಿನ ಧಾರ್ಮಿಕ, ಸಾಮಾಜಿಕ-ಸಾಂಸ್ಕೃತಿಕ ಸ್ಥಿತಿಗತಿಗಳು ಮೇಲಿನ ಮಾತಿಗೆ ಉಪಸ್ತಂಭಕವಾಗಿ ನಿಂತುಕೊಳ್ಳುತ್ತವೆ. ಇವೆಲ್ಲ ಕ್ಷೇತ್ರಗಳು ಅತ್ಯಂತ ಕಲುಪಿತಗೊಂಡು ಹೋಗಿದ್ದವೆಂಬುದಕ್ಕೆ ವಚನಗಳಲ್ಲಿಯೇ ಆಧಾರಗಳು ದೊರಕುತ್ತವೆ. ಪ್ರಭುದೇವರು ಅಂದಿನ ಸಮಾಜವು 'ಹೆಣದಂತಾಗಿತ್ತೆಂದು ಹೇಳುತ್ತಾರೆ.

**ಸಂಸಾರವೆಂಬ ಹೆಣ ಬಿದ್ದಿದ್ದಡೆ,**
**ತಿನಬಂದ ನಾಯ ಜಗಳವ ನೋಡಿರೆ!**
**ನಾಯ ಜಗಳವ ನೋಡಿ ಹೆಣನೆದ್ದುನಗುತ್ತಿದೆ;**
**ಗುಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರೆ**

ಸಾಹಿತ್ಯದ ದೃಷ್ಟಿಯಿಂದಲೂ 'ಅಭಿವ್ಯಕ್ತಿ' ಸ್ವಾತಂತ್ರ್ಯ ಕೆಲವೇ ಕೆಲವರ ಕಪಿಮುಷ್ಟಿಯಲ್ಲಿ ಸಿಲುಕಿಕೊಂಡಿತ್ತು ಬಹುಸಂಖ್ಯಾ ಸಮಾಜವು ಬಾಯಿಗೆ ಬೀಗ ಹಾಕಿಕೊಂಡು ಮೌನದಯಾತನೆ ಅಭುಭವಿಸುತ್ತಿದ್ದತು.ಜನಸಾಮಾನ್ಯರಿಗೆ ಬಿಡಲಿ, ಒಂದಿಷ್ಟು ಪಾಂಡಿತ್ಯ ಸಂಪಾದಿಸಿಕೊಡವರಿಗೂ ಗಡುಚಾದ ಚಂಪೂಶೈಲಿ ಅರಿಯ ದಂತಿದ್ದತು ಸಂಸ್ಕೃತ ಭೂಯಿಷ್ಠವಾದ ಕನ್ನಡವು ಸಂಸ್ಕೃತದ ಪ್ರಕಾಂಡ ಪಂಡಿತ ಅಧೀನದಲ್ಲಿಯೇ ಬಂಧಿಯಾಗಿತ್ತು ಸರಸ್ವತಿಯು ರಾಜಗದ್ದುಗೆಯ ಮೇಲೆ ಕುಳಿತಿದ್ದಳು. ರಾಜನ ಆಸ್ಥಾನದ ಮನೋಹರಿಯಂತೆ ಅವಳು ಕಂಗೊಳಿಸುತ್ತಿದ್ದಳು. ಸಾಮಾಜಿಕವಾಗಿ ಶೂದ್ರರೆಂದು ಪರಿಗಣಿತರಾಗಿದ್ದನರಿಗೆ ಪಾಂಡಿತ್ಯ ಸಂಪಾದನೆಂಯೇ ಒಂದು ಮಹಾ ಅಪರಾಧವಾಗಿತ್ತು ಹೀಗಿರುವಾಗ ಅವರು ಸಾಹಿತ್ಯವನ್ನು ಕೃಷಿ ಮಾಡುವುದಾಗಿಲಿ ಬೇರೆ ಸಾಹಿತ್ಯಕೃತಿಗಳನ್ನು ಓದಿ ಅರ್ಥೈಸಿಕೊಳ್ಳವುದಾಗಲಿ ಇವು ಸಾಧ್ಯವೇ ಇರಲಿಲ್ಲ. ಒಂದು ವೇಳೆ ಅಂತಹ ಪ್ರಯತ್ನಗಳೇನಾದರೂನಡೆದಲ್ಲಿ "ಪಡಿತರುಂ, ವಿವಿಧ ಕಳಾಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್ ಕಂಡರ್ ಕೇಳ್ವಡೆ, ಗೊರವರ ದುಂಡಚೆಯೇ? ಬೀದಿವರೆಯ ಬೀರನ ಕತೆಯೆ? ಎನ್ನುವಂತಹ (ಮಧರ ಕವಿಯ ಆಕ್ಷೇಪಣೆ ಟೀಕೆಗೆ ಒಳಗಾಗಬೇಕಾಗಿತ್ತು. ಇಂತಹ ಸಾಹಿತ್ಯಕ ಸಂದರ್ಭದಲ್ಲಿ ಬಸವಣ್ಣನವರು ಕನ್ನಡ ಭಾಷೆ ಸಾಹಿತ್ಯದ ಏನೆಲ್ಲ ಸೀಮಿತ ಕಟ್ಟು ಪಾಡುಗಳನ್ನು ಮುರಿಯಲುಯತ್ನಿಸಿ, ಆರಮನೆ ಗುರುಮನೆಂಯಲ್ಲಿ ಬಂಧಿಂಯಾಗಿದ್ದ ಸಾಹಿತ್ಯದೇವಿಯನ್ನು ಬೀದಿಗೆ ತಂದು ಜನಸಾಮಾನ್ಯರ ನಡುವೆ ಮರೆಯಿಸಿ, ಅವರ ಗುಡಿಸಲು-ಗುತ್ತೆಗಳಲ್ಲಿ ನೆಲೆಸುವಂತೆ ಮಡುವುದರ ಮೂಲಕ ಅವರಿಗೂ "ಅಭಿವ್ಯಕ್ತಿ ಸ್ವಾತಂತ್ರ್ಯ"ವನ್ನು ದೊರಕಿಸಿಕೊಟ್ಟರು ಅವರು ಸಮಕಾಲೀನರಾದ ಸಮಾನಧರ್ಮಿಗಳೆಲ್ಲರೂ ಅದಕ್ಕೆ ಬೆಂಬಲವಿತ್ತರು. ಆ ಬೆಂಬಲದಿಂದಾಗಿ ಬಸವಣ್ಣನವರು ಸರಳ-ಸುಂದರ-ಸರ್ವರಿಗೂ ತಿಳಿಯಬಲ್ಲ ಸಾಹಿತ್ಯ ಸನ್ಮಾರ್ಗದ ಘೋಷಣೆ ಮಾಡಿದರು.

**ತಾಳಮಾನ ಸಂಸವನರಿತಯೆ,**
**ಒಜೆ-ಬಜಾವಣೆಯ ಲೆಕ್ಕವನರಿಯೆ,**
**ಕೂಡಲಸಂಗಮದೇವಾ, ನಿನಗೆ ಕೇಡಿಲ್ಲವಾಗಿ**
**ಅನು ಒಲಿದಂತೆ ಹಾಡುವೆ**

ಶಿವಶರಣರ ವಚನ ಚಳುವಳಿಯು ಅಂದಿನ ಕಾಲ ಪ್ರವಾಹದ ವೀರುದ್ಧವೇ ಹೊರಟತ್ತು.ಬಹುಸಂಖ್ಯಾತರೆಲ್ಲ ಬಲಿಷ್ಠರ ಬಲಕ್ಕೆ ಹೆದರಿ ಹೋಗಿದ್ದರು.ಅವರು ನುಡಿದದ್ದೆ ಸತ್ಯವಾಗಿತ್ತು.ನಡೆದದ್ದೆ ಧರ್ಮ-ಸಾಮಾಜಿಕ ವ್ಯವಸ್ಥೆ ಆಗಿತ್ತು.ಅಂತಹ ಸಂದರ್ಭದಲ್ಲಿ ಶಿವಶರಣರ "ಆಧರಕ್ಕೆ ಕಹಿಯಾದ ಉದರಕ್ಕೆ ಹಿತವಾದ" ಮಾತುಗಳು ಜನತೆ ಎಷ್ಟರಮಟ್ಟಿಗೆ ಕೇಳುವುದಕ್ಕೆ ಸಿದ್ದರಾದರೆಂಬುದೆ ಸಂಶಯದ ಮಾತು.ಆದರೆ ಶಿವಶರಣರು ಮಾತ್ರ ತಮ್ಮ ಛಲ ಬಿಡಲಿಲ್ಲ "ಎಲ್ಲಿಯವರೆಗೆ ಈ ಸಮಾಜವು ಮನುಷ್ಯನನ್ನು ಮನುಷ್ಯನನ್ನಾಗಿ ಕಾಣುವುದಿಲ್ಲವೋ ಅಲ್ಲಿಯವರೆಗೆ ಜನಕ್ಕೆ ತಿಳುವಳಿಕೆ ನೀಡುತ್ತಲೇ ಇರಬೇಕೆಂಬುದು" ಅವರ ದೃಡ ನಿಲುವಾಗಿತ್ತು.ಶಿವಶರಣರ ತಮ್ಮ ವಚನ ಸಾಹಿತ್ಯದಿಂದ ಲೋಕಕ್ಕೆ ಉಣಗಲಿಸಿದರು, ಉಡಗಲಿಸಿದರು, ಬದುಕುವುದನ್ನು ಕಲಿಸಿದರು.ಮನುಷ್ಯನಾಗುವುದನ್ನು ಕಲಿಸಿದರು.ಅಕ್ಷರ ಜ್ಞಾನದ ಅರಿವನ್ನು ತಿಳಿಸಿದರು ಮಹಾ ಮನುಷ್ಯನಾಗುವ ಕಲೆಯ ರಹಸ್ಯವನ್ನು ಅರುಹಿಸಿದರು. ದೇವಮಷ್ಯನಾಗಿ ದೇವರೆ ಆಗುವ ಸಾಹಿತ್ಯ-ಸಂಸ್ಕೃತಿ ವಿಶ್ವಕ್ಕೆ ಧಾರೆಯರೆದ ಮೌಲ್ಯಗಳನ್ನು ನೀಡಿದ್ದಾರೆ. ಇಂದು ನಿಜಕ್ಕೂ ವಿಶ್ವಕ್ಕೆ ಸುಖ ಶಾತಿ-ಸಮೃದ್ಧಿಗಳು ಬೇಕಾದಲ್ಲಿ ಅದು ವಚನ ವಾಜ್ಞಾಯದ ಸಾಂಸ್ಕೃತಿಕ ಸಂದೇಶದತ್ತ ನೋಡುವುದು ಅತ್ಯಂತ ಅನಿವಾರ್ಯವಾಗಿದೆ.

**ಆಕಾರ ಗ್ರಂಥಗಳು :**


೧) ಬಿ. ವಿರೂಪಾಕ್ಷಪ್ಪ : ಶರಣತತ್ವ ವಿವೇಚನೆ

೨) ಅಂಜನಾ ಕೃಷ್ಣಪ್ಪ : ಶರಣರ ವಚನಗಳು

೩) ಶೈಲಜಾ ಉಡಚಣ : ವಚನ ಸಾಹಿತ್ಯಾ ಮಹಿಳೆ

೪) ಅಂಬಾರಾಯ ಹಾಗರಗಿ : ಅಲ್ಲಮ ಪ್ರಭು ಜೀವನ ಚರಿತ್ರೆ

೫) ಚಿ.ಎಸ್.ಸಿದ್ಧಲಿಂಗಯ್ಯ : ವಚನ ಸಾಹಿತ್ಯ ! ಒಚಿದು ನೋಟ

೬) ಎಚ್.ಚಿ.ಪೋತೆ (ಸಂ) : ವಿಚಾರ ಸಾಹಿತ್ಯ

೭) ಗುರುದೇವಿ ಹುಲೆಪ್ಪನವರ ಮಠ : ಶರಣ ಸನ್ನಿಧಿ

೮) ಬಸವಪಥ ! ಸಂಪುಟ-೨೦, ಸಂಚಿಕೆ-೧

೯) ಬಸವಪಥ ! ಸಂಪುಟ-೩೦, ಸಂಚಿಕೆ-೨

೧೦) ಬಸವಪಥ ! ಸಂಪುಟ-೨೫, ಸಂಚಿಕೆ-೯


■■


ಸಹಾಯಕ ಪ್ರಾಧ್ಯಪಕರು, ವಿ.ಎಂ. ಎಸ್. ಆರ್. ವಸ್ತ್ರದ ಕಲಾ ವಿಜ್ಞಾನ ಹಾಗೂ ವಿ. ಎಸ್. ಬೆಳ್ಳಿಹಾಳ ವಾಣಿಜ್ಯ ಕಾಲೇಜು, ಹುನಗುಂದು ಬಾಗಲಕೋಟ ಜಿಲ್ಲೆ. ಮೊ. ನಂ. ೯೫೩೮೪೪೧೮೫೩

RNI Regd. No. KARBIL/2014/54464

## हिन्दी दिवस समारोह




कर्नाटक केंद्रीय विश्वविद्यालय कलबुरगी में हिन्दी दिवस समारोह में संबोधित करने हुए कुलपति प्रो. बट्टू सत्यनारायण



संत जोसफ पदवी पूर्व महाविद्यालय, विजयपुर में हिन्दी दिवस का आयोजन।



बी.एल.डी.इ. संस्था के बसवेश्वर कला एवं वाणिज्य महाविद्यालय, बसवन बागेवाडी में हिन्दी दिवस के उपलक्ष्य में संबोधित करते हुए डॉ. एस. जे. पवार।

ISSN 2320-0391

सौम्य प्रकाशन
'कबीर कुंज' महाबलेश्वर कॉलनी,
दर्गा जेल के सामने,
विजयपुर - ५८६१०३ (कर्नाटक)

ಸೌಮ್ಯ ಪ್ರಕಾಶನ
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ,
ದರ್ಗಾ ಜೇಲ ಮುಂದೆ,
ವಿಜಯಪುರ - ೫೮೬೧೦೩ (ಕರ್ನಾಟಕ)